ದಿನಾಂಕ: 10-03-2026 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ಎಜಿಪಿ ರವರಿಂದಃ-**

ನಿಪಿ-1 ರ ಪೂರ್ವದಲ್ಲಿ ನಿಪಿ-2 ಅಸ್ತಿತ್ವದಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಕ್ರಿ.ಮಿಸ್ ಪ್ರಕರಣವನ್ನುದಾಖಲಿಸಿ ನಿಪಿ-1 ಅನ್ನು ಪಡೆಯಲು ಹೂಡಿದ್ದೇನೆ ಎಂದರೆ ಹೌದು. ನಾನು ಯಲ್ಲಟ್ಟಿ ಗ್ರಾಮದಲ್ಲಿ ಜನಿಸಿರುತ್ತೇನೆ . ನಿಪಿ-1 ರಲ್ಲಿ ನನ್ನ ಜನ್ಮಸ್ಥಳವನ್ನು ಯಲ್ಲಟ್ಟಿ , ರಬಕವಿ-ಬನಹಟ್ಟಿ ಎಂದು ತೋರಿಸಲಾಗಿದೆ. ನಿಪಿ-2 ರಲ್ಲಿ ನನ್ನ ಜನ್ಮಸ್ಥಳವನ್ನು ತುಂಗಳ ನರ್ಸಿಂಗ ಹೋಮ್, ಜಮಖಂಡಿ ಎಂದು ನಮೂದಿಸಲಾಗಿರುತ್ತದೆ. ನಿಪಿ-1 ಅನ್ನು ಪಡೆದುಕೊಳ್ಳಲು ಅಲಭ್ಯ ಪ್ರಮಾಣಪತ್ರವನ್ನು ಯಲ್ಲಟ್ಟಿ ಗ್ರಾಮದಿಂದ ಪಡೆದುಕೊಂಡಿರುತ್ತೇನೆ. ನಾನು ಜಮಖಂಡಿಯ ತಹಶೀಲ್ದಾರವರಿಗೆ ನನ್ನ ಜನ್ಮ ಪ್ರಮಾಣಪತ್ರ ಇದ್ದರೇ ಕೊಡಿ ಎಂದು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನಿಪಿ-1 ಮತ್ತು ನಿಪಿ-2 ಮಧ್ಯದಲ್ಲಿ ನಿಪಿ-1 ರಲ್ಲಿ ಇದ್ದ ನನ್ನ ಜನ್ಮ ದಿನಾಂಕ ಸರಿಯಾಗಿ ಇರುತ್ತದೆ. ನಿಪಿ-1 ಮತ್ತು 2 ಅನ್ನು ನ್ಯಾಯಾಲಯಕ್ಕೆ ಎರಡು ಜನ್ಮ ದಿನಾಂಕಗಳಲ್ಲಿ ಒಂದು ಜನ್ಮ ದಿನಾಂಕ ಠರಾಯಿಸಿಕೊಳ್ಳಲು ಸಲ್ಲಿಸಿರುತ್ತೇನೆ. ನಾನು ಜನನ - ಮರಣ ನೋಂದಣಿ ಅಧಿಕಾರಿಯವರಿಂದ ನನ್ನ ಜನ್ಮ ದಿನಾಂಕವನ್ನು ತಿದ್ದುಪಡಿ ಮಾಡುವಂತೆ ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ. ನಿಪಿ-2 ರ ಕುರಿತು ನನಗೆ ಗಮನಕ್ಕೆ ಬಂದು ಸುಮಾರು 2-3 ವರ್ಷಗಳು ಆಗಿರುತ್ತದೆ. ನನ್ನ ನಿಜವಾದ ಜನ್ಮ ದಿನಾಂಕ ಹಾಗೂ ಜನ್ಮಸ್ಥಳ ನಿಪಿ-2 ರಲ್ಲಿ ನಮೂದಿಸಿದಂತೆ ಇರುತ್ತದೆ ಎಂದರೆ ಸರಿಯಲ್ಲ. ನಿಪಿ-2 ರ ಅಸ್ತಿತ್ವ ನನಗೆ ಗೊತ್ತಿದ್ದರು ಸಹ ನಾನು ಯಲ್ಲಟ್ಟಿ ಗ್ರಾಮ ಪಂಚಾಯಿತಿಗೆ ಸುಳ್ಳು ಅರ್ಜಿಯನ್ನು ಸಲ್ಲಿಸಿ , ಸುಳ್ಳು ಅಲಭ್ಯ ಪ್ರಮಾಣಪತ್ರ ಪಡೆದು ಕ್ರಿ.ಮಿಸ ಪ್ರಕರಣವನ್ನು ದಾಖಲಿಸಿ ನಿಪಿ-1 ಅನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕ್ರಿ.ಮಿಸ್ ಪ್ರಕರಣದಲ್ಲಿಯೂ ಸಹ ನಾನು ಸರಿಯಾದ ಮಾಹಿತಿಯನ್ನು ಸಲ್ಲಿಸಿ ಆದೇಶವನ್ನು ಕೋರಿರುತ್ತೇನೆ ಎಂದರೆ ಸರಿ . ನ್ಯಾಯಾಲಯವು ಸಹ ಕ್ರಿ.ಮಿಸ್ ಪ್ರಕರಣದಲ್ಲಿ ನಿಪಿ-1 ಅನ್ನು ಕೊಡಬೇಕಾದರೇ ಷರತ್ತನ್ನು ವಿಧಿಸಿ ಕೊಟ್ಟಿರುತ್ತದೆ ಎಂದರೆ ಹೌದು. ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ನೀಡಿ ಕ್ರಿ.ಮಿಸ ಪ್ರಕರಣದಲ್ಲಿ ನಿಪಿ-1 ರಂತೆ ನಾನು ಖೊಟ್ಟಿಯಾಗಿ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಜನ್ಮ ದಿನಾಂಕಃ 31-10-2005 ಅಂತ ಇದ್ದರೂ ಸಹ ನಾನು ನಿಪಿ-1 ಅನ್ನು ಖೊಟ್ಟಿಯಾಗಿ ಸೃಷ್ಟಿ ಮಾಡಿಕೊಂಡು ಖೊಟ್ಟಿ ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ .

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ. ದಂ., ಬನಹಟ್ಟಿ.**